# ಹಿತ್ತಲಿನಲ್ಲೊಂದು ಕಾಲುದಾರಿಯಿತ್ತು



■ ಫಣಿಕುಮಾರ್ ಟಿ.ಎಸ್.

1

ಶ್ರೀನಿವಾಸನಿಗೆ ಚಿಕ್ಕುರುಗೋಡಿನಿಂದ ಗೇಟ್ ಪಾಸು ಸಿಕ್ಕಿದ ಮರುಕ್ಷಣವೇ ಅವನ ಸುತ್ತಲಿನ ಜೀವಜಾಲದ ನೇವರಿಕೆಗಳೆಲ್ಲವೂ ಒಮ್ಮೆಗೇ ಅಸಹಾಯಕವಾಗಿ ಒಂದು ಮೌನ ಮುಜುಗರಕ್ಕೆ ಒಳಗಾದಂತೆ ಭಾಸವಾದವು. ಕುರುಗೋಡಿನ ಗುಂಡಿ ಬಿದ್ದ ಮಣ್ಣಿನ ರಸ್ತೆಗಳ ಜೊತೆಯಲ್ಲಿ ಕಲ್ಲಂತರಾಯನ ಗುಟ್ಟೆಯ ಕಾಲುದಾರಿ ಕೂಡಾ ಇಂದು ಅವನ ನಿರ್ಗಮನವನ್ನು ಅವ್ಯಕ್ತವಾಗಿ ಪರಿತಪಿಸುವ ಹಾಗೆ ಕಂಡಿತು. ಸಾವಿತ್ರಮ್ಮ ಕಳೆದ ಮೂರು ತಿಂಗಳ ಕೆಳಗೆ ಸತ್ತುಹೋದ ನಂತರ ಬದುಕಿನಲ್ಲಿ ತನ್ನ ಪಾತ್ರವೇ ತಿಳಿಯದ ಶ್ರೀನಿವಾಸ ಯಾಕೋ ತನ್ನ ಕುಟುಂಬದಲ್ಲಿ ಅತಿವೇಗವಾಗಿ ಕ್ಷುಲ್ಲಕನಾಗಿ ಬಿಟ್ಟ. ಈ ಪ್ರಸ್ತುತತೆ, ಅಪ್ರಸ್ತುತತೆಗಳು ತಮ್ಮ ಪಾಡಿಗೆ ತಾವು ಘಟಿಸುತ್ತವೆ, ಅವುಗಳಿಗೆ ಯಾವ ಪ್ರಯತ್ನವೂ ಬೇಡ ಅನ್ನುವ ಹಾಗೆ ಇಂದು ಅವನ ಭುಜಕ್ಕೆ ಭಾರದ ಬ್ಯಾಗೊಂದು ತೂಗುತ್ತಿತ್ತು. ಬ್ಯಾಗಿನಲ್ಲಿ ಅವನ ಬಟ್ಟೆಬರೆಗಳಿಗಿಂತಲೂ ಅವ್ಯಕ್ತ ಭಾವನೆಗಳಿಗೇ ಹೆಚ್ಚಿನ ಸ್ಥಾನ ಎನ್ನುವಂತೆ ಅದರ ಭಾರ ಹೆಚ್ಚಾಗಿ ಕಾಣುತ್ತಿತ್ತು.

ಅವನು ಚಿಕ್ಕಮಗಳೂರಿಗೆ ಹೋಗ್ತಿರೋದನ್ನು ತಿಳಿದುಕೊಂಡ ಗೆಳೆಯ ಬಸೀರೆಡ್ಡಿ, 'ಅಪ್ಪೀ, ಸಿಟಿಗೆ ಹೋಗ್ತಿದಿಯಾ? ತುಂಬಾ ದೂರಾನಂತೆ. ನನ್ನ ಮರೆತುಬಿಡಬೇಡಪ್ಪೋ' ಅಂದಾಗ ಶ್ರೀನಿವಾಸನ ಮುಖದಲ್ಲಿನ ವಿಚಿತ್ರವಾದ ಗೊಂದಲ ನೋಡಬೇಕಿತ್ತು. ಇಬ್ಬರ ನಡುವಿನ ಎಲ್ಲ ಭೌತಿಕ ಸಂವಹನಕ್ಕೆ ಆಗ ಅಲ್ಪವಿರಾಮ ಬಿದ್ದು, ಮಾತಿರದ ಮಮತೆಯೊಂದು ಅವರ ಸುತ್ತ ಆವರಿಸಿಕೊಂಡಿದ್ದನ್ನು ಯಾರಾದರೂ ಸೂಕ್ಷ್ಮವಾಗಿ ಗಮನಿಸಬಹುದಿತ್ತು. ಸುಮಿತ್ರಕ್ಕನ ಗಂಡ, ಶೇಷಾಚಲ ಬಾವ ಚಿಕ್ಕಮಗಳೂರಿನವನೇ. ಶ್ರೀನಿವಾಸನ ಅಪ್ಪ ಶೇಷಗಿರಿರಾಯನ ದೂರದ ಬಂಧು ಕಬ್ಬಿನಳ್ಳಿ ಕುಮಾರಸ್ವಾಮಿಯ ಮಗ ಅವನು. ಕಬ್ಬಿನಳ್ಳಿಯಲ್ಲಿ ಪಿತ್ರಾರ್ಜಿತವಾಗಿ ಬಂದಿದ್ದ ಹನ್ನೆರಡೆಕರೆ ತೋಟದಲ್ಲಿ ಕಾಫಿ ಪ್ಲಾಂಟೇಷನಿನಿಂದ ಸಾಕಷ್ಟು ಕಾಸು ಮಾಡಿದ್ದ. ಗೆದ್ದೆತ್ತಿನ ಬಾಲ ಹಿಡಿದ ಹಾಗೆ ಎರಡು ವರ್ಷದ ಹಿಂದೆ ಆರಂಭಿಸಿದ್ದೇ ರಾಯಲ್ ಹೋಮ್ ಸ್ಟೇ. ಆದರೆ ಕೆಲಸ ಮಾಡೋರು ಸರಿಯಾಗಿ ಸಿಗ್ತಾ ಇಲ್ಲ, ಬಂದೋರು ಹೇಳದೇ ಕೇಳದೇ ಬಿಟ್ಟು ಹೋಗ್ತಾರೆ ಅಂದಾದ ಮೇಲೆ ಸಾವಿತ್ರಮ್ಮನಿಗೆ ಕಳೆದ ವರ್ಷವೇ ಮಗಳ ಮೂಲಕ ಆಫರ್ ನೀಡಿದ್ದ. 'ಊಟ ತಿಂಡಿ ಎಲ್ಲಾ ಅಲ್ಲೇ ಆಗೋಗುತ್ತೆ. ಗೆಸ್ಟ್‌ಗಳನ್ನ ನೋಡಿಕೊಳ್ಳೋದು, ಕಾಫಿ ಎಸ್ಟೇಟಲ್ಲಿ ನಿಧಾನ ಅಡ್ಡಾಡಿಕೊಂಡು ಇರೋದು. ತಿಂಗಳಿಗೊಂದು ಐದು ಸಾವಿರ ಅಕೌಂಟಿಗೆ ಹಾಕ್ತೇನೆ. ಮದುವೆ ಇಲ್ಲ ಮಕ್ಕಳಿಲ್ಲ, ಇರ್ತಾನೆ ಆರಾಮಾಗಿ'.

ಸಾವಿತ್ರಮ್ಮ ಸುತರಾಂ ಒಪ್ಪಿರಲಿಲ್ಲ. ಶ್ರೀನಿವಾಸನ ಪೆಚ್ಚುತನವನ್ನು ತಾನೇ ಸಾಕಬೇಕು. ಅವನು ದೂರಾಗಿಹೋದರೆ ತನಗೇ ಅಂತ ಇದ್ದ ಒಂದೇ ಒಂದು ನಿರುಪದ್ರವಿಯಾದ, ಭಾವನಾತ್ಮಕವಾದ ಕೊಂಡಿಯೂ ಕಳಚಿ ತಾನು ಅಂಗವಿಹೀನಳಾಗುತ್ತೇನೆ ಎನ್ನುವಂತೆ ಪರಿತಪಿಸಿದ್ದಳು. ಮಗಳ ಸಂದೇಶ ಬಂದ ದಿನವಂತೂ ಸಾವಿತ್ರಮ್ಮ ಶ್ರೀನಿವಾಸನನ್ನು ಮುಂದೆ ಕೂಡಿಸಿಕೊಂಡು ಅವನ ತಲೆ ನೇವರಿಸುವ, ಗಲ್ಲ–ಬೆನ್ನುಗಳನ್ನು ಸವರುವ, ಸೊಟ್ಟಗಿನ ಕಾಲನ್ನು ಆರ್ದ್ರತೆಯಿಂದ ನೀವುವ ಮೂಲಕ ಅವನ ಕುರಿತಂತೆ ತನ್ನಲ್ಲಿದ್ದ ಭಾವತೀವ್ರ ಕಂಪನಗಳನ್ನು ಸುತ್ತಲಿನ ಪರಿಸರದೊಳಗೆ ವಿನಿಮಯಿಸುವ ಪ್ರಯತ್ನ ಮಾಡಿದಳು. ಆ ಕಂಪನ ವಿಸ್ತರಣೆಯು ಆಕೆಯ ಅಂತಃಸತ್ವವನ್ನೇ ಅದೆಷ್ಟು ಉದ್ದೀಪನಗೊಳಿಸಿತೆಂದರೆ, ಕಡೆಗೆ ದೊಡ್ಡಮಗ ರಾಮಣ್ಣನ ಸಿಡಿಮಿಡಿಯೂ ಅದರಿಂದ ತಲ್ಲಣಿಸಿ ನಿಸ್ತೇಜವಾಗುವ ಹಾಗೆ ಮಾಡಿತ್ತು. 'ಲೇ ರಾಮಣ್ಣಾ, ನೀನು ಹೇಳಿದಂತೆಲ್ಲಾ ಕೇಳಕಾಗೋಲ್ಲ. ಶ್ರೀನಿವಾಸ ಇಲ್ಲೇ ಇರಲಿ, ನಾನಿರೋವರೆಗೆ ಅವನನ್ನ ಎಲ್ಲೂ ಕಳಿಸಕ್ಕೆ ಬಿಡಲ್ಲ' ಎಂದು ಖಂಡತುಂಡವಾಗಿ ಹೇಳಿ, ತನ್ನ ಕಡುಪ್ರತಿಕ್ರಿಯೆಗೆ ತನ್ನೊಳಗೇ ಉಕ್ಕಿದ ಆಕ್ರೋಶದ ಅಲೆಗಳನ್ನು ಸಂತೈಸಿಕೊಳ್ಳಲು ಸಾಧ್ಯವಾಗದೇ ನಲುಗಿದಳು. ಎಂದು ಆಕೆ ಬಚ್ಚಲಲ್ಲಿ ಜಾರಿ ಬಿದ್ದಳೋ, ಆಕೆಯೊಂದಿಗೆ ಶ್ರೀನಿವಾಸನ ಗ್ರಹಗತಿಯೂ ಕೆಟ್ಟುಹೋಯಿತು. ಚಿಕ್ಕಪ್ಪಾ ಅಂತ ಆಗಾಗ್ಗೆ ಹತ್ತಿರ ಬರ್ತಿದ್ದ ಆರನೇ ಕ್ಲಾಸಿನ ವಿಷ್ಣುವರ್ಧನನೂ ಈಗ ಕಲ್ಲೂಡಿಯ ಲಿಟಲ್ ಫ್ಲವರ್ ಶಾಲೆಯಲ್ಲಿ ಕಲಿಯುವ ಕೆಲಸದಲ್ಲಿ ಫುಲ್ ಬ್ಯುಸಿಯಾದ.

2

ಪರವಾಗಿಲ್ಲ ಶೇಷಾಚಲ. ನಾಲ್ಕು ರೂಂ ಎಕ್ಸ್‌ಟ್ರಾ ಹಾಕಿಸಿದರೂ, ವೀಕೆಂಡು ಗಿರಾಕಿಗಳು ತುಂಬಿರ್ತಾರೆ ಎಂದು ಎದುರುಗಡೆ ಕಿಂಗ್‌ಸ್ಟನ್ ಹೋಮ್‌ಸ್ಟೇ ಮಾಲಿಕ ಭೋಜೇಗೌಡ ಹೇಳಿದ ಮೇಲಂತೂ ಶೇಷಾಚಲನನ್ನು ಒಂದು ದಿಗ್ಭ್ರಾಂತ ಭಾವ ಪ್ರವೇಶಿಸಿಬಿಟ್ಟಿತು. ಒಂದೆಕರೆ ಜಾಗದಲ್ಲಿ, ಅದೂ ಕಾಫಿ ತೋಟವೂ ಇಲ್ಲದೇನೇ ಭೋಜೇಗೌಡ ಹೋಮ್‌ಸ್ಟೇ ನಡೆಸುತ್ತಿದ್ದಾನೆ. ಹಾಗಿದ್ದಾಗ ನೇಚರ್ ಮಧ್ಯದಲ್ಲಿರೋ ನನ್ನ ಹೋಮ್‌ಸ್ಟೇ ಇನ್ನೆಷ್ಟು ಚೆನ್ನಾಗಿರಬೇಡ! ಈ ಭೋಜೇಗೌಡ ಯಾಕೋ ನನ್ನದೇ ಆದಾಯದ ಮೂಲವನ್ನು ಅತಿಕ್ರಮಿಸುತ್ತಿದ್ದಾನೆಂಬ ಅಸೂಯೆ ಅವನಲ್ಲಿ ಜಾಗೃತವಾಗಿ ಒಮ್ಮೆಗೇ ದೇಹವು ಆಲಸ್ಯಗೊಂಡ ಭಾವವನ್ನು ಅನುಭವಿಸುವ ಹಾಗೆ ಆಯಿತು. ಚಿಕ್ಕಮಗಳೂರಿನ ಸುತ್ತಲೂ ನಾಯಿಕೊಡೆಗಳಂತೆ ಹುಟ್ಟಿಕೊಂಡಿರುವ ಹೋಮ್‌ಸ್ಟೇಗಳಿಗೆ ಬೆಂಗಳೂರಿನವರೇ ಜಾಸ್ತಿ ಬರುವುದು.

ಈಗ ಶೇಷಾಚಲನ ಸಾಫ್ಟ್‌ವೇರ್ ಎಂಜಿನಿಯರ್ ಮಗ ಚಂದ್ರಹಾಸನಂತೂ ಬೆಂಗಳೂರಿನ ತನ್ನ ಬಾಡಿಗೆ ಅಪಾರ್ಟ್‌ಮೆಂಟಿನಲ್ಲಿ ಕೂತೇ ಅಪ್ಪನ ರಾಯಲ್ ಹೋಮ್‌ಸ್ಟೇಯನ್ನ ಡಿಜಿಟಲ್ ಮಾರ್ಕೆಟಿಂಗ್ ಮಾಡ್ತಿದ್ದಾನೆ. ಸರ್ಚ್ ಎಂಜಿನ್